# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 763 |
| ಉತ್ತರಿಸುವ ದಿನಾಂಕ | 21-02-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯದ ಪ್ರಮಾಣ ಎಷ್ಟು; ಮತ್ತು ಇದರಲ್ಲಿ ಬೆಂಗಳೂರಿನ ಪಾಲು ಎಷ್ಟು; | 2021-22ನೇ ಸಾಲಿನಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ರಾಜ್ಯದ ಒಟ್ಟು ರಾಜಸ್ವ ರೂ.14246.02 ಕೋಟಿಗಳು ಇದರಲ್ಲಿ ಬೆಂಗಳೂರಿನ ಪಾಲು ರೂ.9051.31 ಕೋಟಿಗಳು.<br><br>2022-23ನೇ ಸಾಲಿನಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ರಾಜ್ಯದ ಒಟ್ಟು ರಾಜಸ್ವ ರೂ.17873.97 ಕೋಟಿಗಳು ಇದರಲ್ಲಿ ಬೆಂಗಳೂರಿನ ಒಟ್ಟು ರಾಜಸ್ವ ರೂ.10932.59 ಕೋಟಿಗಳು.<br><br>2023-24ನೇ ಸಾಲಿನಲ್ಲಿ (ಏಪ್ರಿಲ್ 2023 ರಿಂದ ಜನವರಿ 2024 ರವರೆಗೆ) ರಾಜ್ಯದ ಒಟ್ಟು ರಾಜಸ್ವ ರೂ.15869.18 ಕೋಟಿಗಳು, ಇದರಲ್ಲಿ ಬೆಂಗಳೂರಿನ ಪಾಲು ರೂ.10225.08 ಕೋಟಿಗಳು. |
| ಆ | ಬೆಂಗಳೂರಿನ ಉಪನೋಂದಣಾಧಿಕಾರಿಗಳ ಕಛೇರಿಗಳಲ್ಲಿ ವಾರ್ಷಿಕವಾಗಿ ನೋಂದಣಿಯಾಗುತ್ತಿರುವ ವಹಿವಾಟಿನ ವಿವರ ನೀಡುವುದು; | 2021-22ನೇ ಸಾಲಿನಲ್ಲಿ ಬೆಂಗಳೂರಿನ ಒಟ್ಟು ದಸ್ತಾವೇಜು 4,32,437 ಹಾಗೂ ರಾಜಸ್ವ ರೂ.9051.31 ಕೋಟಿಗಳು<br><br>2022-23ನೇ ಸಾಲಿನಲ್ಲಿ ಬೆಂಗಳೂರಿನ ಒಟ್ಟು ದಸ್ತಾವೇಜು 5,10,894 ಹಾಗೂ ರಾಜಸ್ವ ರೂ.10932.59 ಕೋಟಿಗಳು<br><br>2023-24ನೇ ಸಾಲಿನಲ್ಲಿ (ಏಪ್ರಿಲ್ 2023 ರಿಂದ ಜನವರಿ 2024 ರವರೆಗೆ) ಬೆಂಗಳೂರಿನ ಒಟ್ಟು ದಸ್ತಾವೇಜು 4,31,507 ಹಾಗೂ ರಾಜಸ್ವ ರೂ.10225.08 ಕೋಟಿಗಳು. |
| ಇ | ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ನೋಂದಣಿಯಾಗುತ್ತಿದ್ದು, ಸದರಿ ಉಪನೋಂದಣಾಧಿಕಾರಿಗಳ ಕಾರ್ಯಾಲಯಗಳ ಮೇಲಿನ ಒತ್ತಡ ತಗ್ಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುದು; | ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚಿನ ನೋಂದಣಿಯಾಗುವುದನ್ನು ಪರಿಗಣಿಸಿ, ಸದರಿ ಜಿಲ್ಲೆಯಲ್ಲಿನ ಐದು ನೋಂದಣಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಂದು ನೋಂದಣಿ ಜಿಲ್ಲೆಯಲ್ಲಿ ಸುಮಾರು 7 ರಿಂದ 10 ಉಪನೋಂದಣಾಧಿಕಾರಿಗಳ ಕಛೇರಿಗಳಿದ್ದು, ಸದರಿ ಜಿಲ್ಲೆಯ ವ್ಯಾಪ್ತಿಯಲ್ಲಿನ ಯಾವುದಾದರೂ ಒಂದು ಉಪ ನೋಂದಣಿ ಕಛೇರಿಯನ್ನು ಸಾರ್ವಜನಿಕರು ಆಯ್ಕೆ ಮಾಡಿಕೊಂಡು ದಸ್ತಾವೇಜುಗಳನ್ನು ನೋಂದಾಯಿಸುವ Anywhere Registration ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br><br>ಸದರಿ ವ್ಯವಸ್ಥೆಯಲ್ಲಿ ಸಾರ್ವಜನಿಕರು ಹೆಚ್ಚಿನ ಕೆಲಸದ ಒತ್ತಡವಿರುವ ಒಂದು ನೋಂದಣಿ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಉಪ ನೋಂದಣಿ ಕಛೇರಿಯ ಬದಲಿಗೆ ಕಡಿಮೆ ಕೆಲಸದ ಒತ್ತಡವಿರುವ ಉಪ ನೋಂದಣಿ ಕಛೇರಿಯನ್ನು ಆಯ್ಕೆ ಮಾಡಿಕೊಂಡು, ಸದರಿ ನೋಂದಣಿ ಜಿಲ್ಲೆಯ |

| | | |
|---|---|---|
| | | ವ್ಯಾಪ್ತಿಗೆ ಸಂಬಂಧಿಸಿದ ಸ್ವತ್ತುಗಳ ದಸ್ತಾವೇಜುಗಳನ್ನು ನೋಂದಾಯಿಸಿಕೊಳ್ಳುವುದರಿಂದ ಹೆಚ್ಚು ಕೆಲಸವಿರುವ ಉಪ ನೋಂದಣಿ ಕಛೇರಿಗಳ ಮೇಲಿರುವ ಒತ್ತಡವನ್ನು ತಗ್ಗಿಸಲಾಗಿದೆ.<br><br>ನೂತನವಾದ ಜನಸ್ನೇಹಿ ಕಾವೇರಿ 2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ರಾಜ್ಯದ ಎಲ್ಲಾ ಉಪ ನೋಂದಣಿ ಕಛೇರಿಗಳಲ್ಲಿ ಅಳವಡಿಸಿ ಜಾರಿಗೆ ತರಲಾಗಿದೆ. ಇದರಿಂದ ಆನ್‌ಲೈನ್‌ನಲ್ಲಿಯೇ ಸಾರ್ವಜನಿಕರು ದಸ್ತಾವೇಜುಗಳಿಗೆ ಸಂಬಂಧಿಸಿದ Data ಮಾಹಿತಿಯನ್ನು ನಮೂದಿಸಿಕೊಂಡು, ಶುಲ್ಕಗಳನ್ನು ಪಾವತಿಸಿ, ನಿಗದಿಪಡಿಸಿಕೊಂಡ ದಿನಾಂಕ ಮತ್ತು ಸಮಯಕ್ಕೆ ಹಾಜರಾಗಿ ದಸ್ತಾವೇಜುಗಳನ್ನು ನೋಂದಾಯಿಸಿಕೊಳ್ಳುತ್ತಿರುವುದರಿಂದ, ಸದರಿ ಕಛೇರಿಗಳಲ್ಲಿ ಈ ಹಿಂದೆ ಇದ್ದ ಕೆಲಸದ ಒತ್ತಡವನ್ನು ತಗ್ಗಿಸಲಾಗಿದೆ.<br><br>2004ರ ಸಾಲಿನ ನಂತರ ನೋಂದಾಯಿಸಲಾದ ದಸ್ತಾವೇಜುಗಳ ದೃಢೀಕೃತ ನಕಲುಗಳನ್ನು ಹಾಗೂ ಸ್ವತ್ತಿಗೆ ಸಂಬಂಧಿಸಿದ 2004ನೇ ಸಾಲಿನ ನಂತರದ ಅವಧಿಯ ಋಣಭಾರ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಾರ್ವಜನಿಕರು ಆನ್‌ಲೈನ್‌ನಲ್ಲಿ ಸಲ್ಲಿಸಿ, ಶುಲ್ಕಗಳನ್ನು ಆನ್‌ಲೈನ್‌ನಲ್ಲಿ ಪಾವತಿಸುತ್ತಿದ್ದು, ದಾಖಲೆಗಳನ್ನು ಉಪನೋಂದಣಾಧಿಕಾರಿಗಳು ಆನ್‌ಲೈನ್‌ನಲ್ಲಿ ಸಾರ್ವಜನಿಕರೇ ನೀಡುತ್ತಿರುವುದರಿಂದ, ಸಾರ್ವಜನಿಕರು ಕಛೇರಿಗಳಿಗೆ ಬರುವುದನ್ನು ತಪ್ಪಿಸಿ ಕಛೇರಿಗಳಲ್ಲಿನ ಜನದಟ್ಟನೆ ತಗ್ಗಿಸಲಾಗಿದ್ದು, ಇದರಿಂದ ಕೆಲಸದ ಒತ್ತಡವನ್ನು ಸಹ ತಗ್ಗಿಸಲಾಗಿದೆ. |
| ಈ | ಸಾರ್ವಜನಿಕರು ಬಯಸಿದ ಯಾವುದೇ ರಾಜ್ಯದ ಯಾವುದೇ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ವಹಿವಾಟು ನಡೆಸಲು ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಸೌಲಭ್ಯವನ್ನು ಜಾರಿಗೊಳಿಸಲಾಗುವುದು? | ಸಾರ್ವಜನಿಕರು ಬಯಸಿದ ರಾಜ್ಯದ ಯಾವುದೇ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ವಹಿವಾಟು ನಡೆಸಲು ಅವಕಾಶ ಕಲ್ಪಿಸಲು ಉದ್ದೇಶಿಸವಿದ್ದು, ಪ್ರಸ್ತುತ ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳಲ್ಲಿ Pilot Basis ರಲ್ಲಿ ಜಾರಿಗೆ ತರಲಾಗಿದ್ದು, ಇದರ ಆಗೂ-ಹೊಗುಗಳನ್ನು ಪರಿಶೀಲಿಸಿ ರಾಜ್ಯ ವ್ಯಾಪ್ತಿಯಲ್ಲಿ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು. |

ಕಂಇ/31/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು